# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **23** |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ಪ್ರತಿನಿತ್ಯ ಬೇಡಿಕೆ ಇರುವ ವಿದ್ಯುತ್ ಪ್ರಮಾಣವೆಷ್ಟು;</td><td>ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯ ಮೈಸೂರು. ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ 2025-26ನೇ ಸಾಲಿನಲ್ಲಿ ಜೂನ್ - 2025 ರಲ್ಲಿ ಬೇಡಿಕೆಗೆ ತಕ್ಕಂತೆ ವಿದ್ಯುತ್ ಪೂರೈಸಲಾಗಿದೆ ಹಾಗೂ ಬಳಕೆಯಾದ ವಿದ್ಯುತ್ ಪ್ರಮಾಣದ ವಿವರ ಈ ಕೆಳಕಂಡಂತಿವೆ:<br><br>
<table>
<tr><th rowspan="2">ಜಿಲ್ಲೆ</th><th colspan="2">ಬಳಕೆಯಾದ ವಿದ್ಯುತ್ ಪ್ರಮಾಣ</th></tr>
<tr><th>2025-26 ಸಾಲಿನ ಜೂನ್25ರ ಅಂತ್ಯಕ್ಕೆ (ಮಿ.ಯೂನಲ್ಲಿ)</th><th>ದಿನವಹಿ ಸರಾಸರಿ (ಮಿ.ಯೂನಲ್ಲಿ)</th></tr>
<tr><td>ಮೈಸೂರು</td><td>825.54</td><td>9.07</td></tr>
<tr><td>ಮಂಡ್ಯ</td><td>284.90</td><td>3.13</td></tr>
<tr><td>ಚಾಮರಾಜನಗರ</td><td>665.53</td><td>7.31</td></tr>
<tr><td>ಹಾಸನ</td><td>517.72</td><td>5.69</td></tr>
</table></td></tr>
<tr><td>ಆ)</td><td>ಬೇಡಿಕೆ ಪ್ರಮಾಣಕ್ಕೆ ಅನುಸಾರವಾಗಿ ವಿದ್ಯುತ್ ಪೂರೈಸಲಾಗುತ್ತಿದೆಯೇ; ಹಾಗೂ ಉತ್ಪಾದನಾ ಪ್ರಮಾಣ ಇದೆಯೇ;</td><td rowspan="2">ಪ್ರಸ್ತುತ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯಲ್ಲಿ ಬೇಡಿಕೆಯ ಪ್ರಮಾಣಕ್ಕೆ ಅನುಸಾರವಾಗಿ ವಿದ್ಯುತ್ ಪೂರೈಸಲಾಗುತ್ತಿದೆ.<br><br>ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯ ಮೈಸೂರು. ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ 2025-26ನೇ ಸಾಲಿನಲ್ಲಿ ಜೂನ್ - 2025 ರ ಅಂತ್ಯಕ್ಕೆ ಒಟ್ಟು 2293.69 ಮಿ.ಯೂ ಬಳಕೆಯಾಗಿದ್ದು, ಕೊಡಗು ಜಿಲ್ಲೆ ಸೇರಿದಂತೆ ಚಾವಿಸನಿನಿ ವ್ಯಾಪ್ತಿಯಲ್ಲಿ ಒಟ್ಟು 2380.83 ಮಿ.ಯೂ ಬಳಕೆಯಾಗಿರುತ್ತದೆ.</td></tr>
<tr><td>ಇ)</td><td>ಇದ್ದಲ್ಲಿ, ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದಸಲಾಗುತ್ತಿದೆ; ಹಾಗೂ ಎಷ್ಟು ಬಳಕೆಗೆ ವಿನಿಯೋಗವಾಗುತ್ತಿದೆ;</td></tr>
<tr><td>ಈ)</td><td>ಬಳಕೆಗೆ ಕೊರತೆ ಇರುವ ವಿದ್ಯುತ್‌ನ್ನು ಖರೀದಿಸಲಾಗುತ್ತಿದೆಯೇ; ಹಾಗಿದ್ದಲ್ಲಿ ಯಾವ ಯಾವ ಮೂಲಗಳಿಂದ ವಿದ್ಯುತ್ ಖರೀದಿಸಲಾಗುತ್ತಿದೆ; ಇದಕ್ಕಾಗಿ ವ್ಯಯಿಸುತ್ತಿರುವ ಹಣವೆಷ್ಟು;</td><td>ಚಾವಿಸನಿನಿಯು ವಿದ್ಯುತ್ ಬೇಡಿಕೆಯನ್ನು ನೀಗಿಸಲು PCKL ಮುಖಾಂತರ ವಿದ್ಯುತ್ ವಿನಿಮಯ ಕೇಂದ್ರಗಳಿಂದ 2024-25ರಲ್ಲಿ 397.201MU ವಿದ್ಯುತ್ ನ್ನು ರೂ. 289.401 ಕೋಟಿಗಳಷ್ಟು ವೆಚ್ಚದಲ್ಲಿ ಹಾಗೂ 2025-26 ರಲ್ಲಿ ಜುಲೈ 2025 ರ ಅಂತ್ಯದವರೆಗೆ 185.283MU ಗಳಷ್ಟು ವಿದ್ಯುತ್ ನ್ನು ರೂ.126.620 ಕೋಟಿಗಳಷ್ಟು ವೆಚ್ಚದಲ್ಲಿ ಖರೀದಿ ಮಾಡಿದೆ.</td></tr>
</table>

| | | |
|---|---|---|
| ಉ) | ವಿದ್ಯುತ್ ಖರೀದಿ ಬದಲು ವಿದ್ಯುತ್ ಉತ್ಪಾದನೆ ಹೆಚ್ಚಳ ಮಾಡಲು ಕೈಗೊಂಡ ಪರ್ಯಾಯ ಕ್ರಮಗಳೇನು? | ರಾಜ್ಯವು KUSUM-B, KUSUM-C, PM Surya Ghar ಇತ್ಯಾದಿ ಸೌರ ವಿದ್ಯುತ್ ಯೋಜನೆಗಳಲ್ಲದೆ, ರಾಜ್ಯದ ವಿದ್ಯುತ್ ಉತ್ಪಾದನೆ ಹೆಚ್ಚಿಸಲು 10 ವರ್ಷಗಳ ಅವಧಿಯನ್ನು ಗಮನದಲ್ಲಿಟ್ಟುಕೊಂಡು RAP (ಸಂಪನ್ಮೂಲ ಸಮರ್ಪಕತೆ ಯೋಜನೆ) ಅಧ್ಯಯನವನ್ನು ಪೂರ್ಣಗೊಳಿಸಿ ಈ ಕೆಳಗಿನ ಕ್ರಮಗಳನ್ನು ಕೈಗೊಂಡಿದೆ.<br>• ಕರ್ನಾಟಕ ರಾಜ್ಯವು ಶಕ್ತಿ ನೀತಿಯಡಿ 2000MW ದೀರ್ಘಾವಧಿ ಉಷ್ಣ ವಿದ್ಯುತ್ ಖರೀದಿ ಮಾಡಲು ಕ್ರಮ ಕೈಗೊಳ್ಳುತ್ತಿದೆ.<br>• ಕವಿನಿನಿ ವತಿಯಿಂದ 2000MW ಶರಾವತಿ ಪಂಪ್ಡ ಸ್ಟೋರೇಜ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾರ್ಯಾದೇಶ ನೀಡಿದೆ.<br>• 1000MW ಪಂಪ್ಡ ಸ್ಟೋರೇಜ್ ಯೋಜನೆಯನ್ನು ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಕಾರ್ಯಾದೇಶ ನೀಡಿದೆ.<br>• DVC ಯೊಂದಿಗೆ 300MW ವಿದ್ಯುತ್ ಪಡೆಯಲು ದಿನಾಂಕ: 30.06.2025 ರಂದು ಖರೀದಿ ಒಪ್ಪಂದಕ್ಕೆ ಸಹಿ ಮಾಡಲಾಗಿದೆ.<br>• ಕೇಂದ್ರ ಸರ್ಕಾರಿ ಸಂಸ್ಥೆಯಾದ NHPC ಯಿಂದ 403MW ವಿದ್ಯುತ್ ಪಡೆಯಲು ದಿನಾಂಕ 26.06.2025 ರಂದು ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಮಾಡಲಾಗಿದೆ. |

ಸಂಖ್ಯೆ: ಎನರ್ಜಿ 163 ಇಬಿಎಸ್ 2025

(ಕೆ.ಜೆ.ಜಾರ್ಜ್) 12/8/25

ಇಂಧನ ಸಚಿವರು